ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

22

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE : 9-12-202.

# ಕಲಾಪಕ್ಕೆ ಶಾಸಕರು ಗೈರು: ಸ್ಪೀಕರ್ ಕಾಗೇರಿ ಗುರ್!

## ಚರ್ಚೆಗೆ ನೋಟಿಸ್ ನೀಡಿ ಚಕ್ಕರ್ ಹೊಡೆದ ಶಾಸಕರು | ಸಿದ್ದು, ಮಾಧುಸ್ವಾಮಿ ಬೇಸರ

ವಿಧಾನಸಭೆ: ಕಾರ್ಯ-ಕಲಾಪಗಳಗಳ ಪಟ್ಟಿಯಲ್ಲಿ ವಿಷಯಗಳಿದ್ದರೂ ಚರ್ಚೆಯ ವೇಳೆ ಶಾಸಕರು ಗೈರಾಗಿದ್ದಕ್ಕೆ ವಿಧಾನಸಭೆಯಲ್ಲಿ ತೀವ್ರ ಅಸಮಾಧಾನ ವ್ಯಕ್ತವಾಯಿತು.



ಚರ್ಚೆಯ ಸಂಬಂಧ ನೋಟಿಸ್ ನೀಡಿದ ಶಾಸಕರು ಇಲ್ಲದಿರುವುದಕ್ಕೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅಷ್ಟೇ ಅಲ್ಲದೆ, ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಮತ್ತು ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರೂ ಬೇಸರ ವ್ಯಕ್ತಪಡಿಸಿದರು. ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಸಾರ್ವಜಿಕ ಮಹತ್ವದ ಜರೂರು ವಿಷಯಗಳ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟರು. ಈ ವೇಳೆ ನೋಟಿಸ್ ನೀಡಿದ ಸಂಬಂಧಿತ ಸದಸ್ಯರು ಸದನದಲ್ಲಿ ಹಾಜರಿಲ್ಲದಿರುವುದನ್ನು ಗಮನಿಸಿದರು. ಕಾರ್ಯಕಲಾಪ ಪಟ್ಟಿಯಲ್ಲಿ ವಿಷಯ ಇದೆ. ಆದರೆ, ಯಾರೂ ಇಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವಿವಿಧ ಕಾಮಗಾರಿಗಳಿಗೆ ಅನುದಾನ ಬಿಡುಗಡೆಮಾಡುವವಿಚಾರಪ್ರಸ್ತಾಪಿಸಲು ಜೆಡಿಎಸ್ ಸದಸ್ಯರಾದ ಆರ್.ಮಂಜುನಾಥ್, ಎಚ್.ಡಿ. ರೇವಣ್ಣ, ಕೆ.ಎಂ.ಶಿವಲಿಂಗೇಗೌಡ, ಎಚ್.ಕೆ. ಕುಮಾರಸ್ವಾಮಿ ಸೇರಿದಂತೆ ಇತರರು ಅವಕಾಶ ಕೋರಿದ್ದರು. ಚರ್ಚೆಗೆ ಅವಕಾಶ ನೀಡುವ ವೇಳೆ ಅವರೆಲ್ಲರೂ ರೈತರ ಪರವಾಗಿ ಪ್ರತಿಭಟನೆ ನಡೆಸಲು ಹೊರಹೋಗಿದ್ದರು. ಕಾನೂನು ಮತ್ತು ಸಂಸದೀಯ ವ್ಯವಹಾರಗಳಸಚಿವಜೆ.ಸಿ.ಮಾಧುಸ್ವಾಮಿಮಾತನಾಡಿ, ಇದನ್ನು ನಾವು ಗಂಭೀರವಾಗಿ ಪರಿಗಣಿಸಬೇಕು. ಅಜೆಂಡಾದಲ್ಲಿ ವಿಷಯವಿದ್ದರೂ ಸದನಕ್ಕೆ ಬರಲ್ಲ ಎಂದರೆ ಹೇಗೆ? ಇನ್ನು ಮುಂದೆ ಅವರ ವಿಷಯ ತರಬೇಡಿ ಎಂದರು. ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಮಾತನಾಡಿ, ಕಾರ್ಯ-ಕಲಾಪದಲ್ಲಿ ವಿಷಯವಿದ್ದಾಗ ಸದಸ್ಯರು ಇರಬೇಕಿತ್ತು ಎಂದು ಹೇಳಿದರು.